ದಿನಾಂಕ 10.01.2018 ರಂದು ಜರುಗಿದ

ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು

# Proceedings of the Special Syndicate Meeting held on 10-01-2018

ಬೆಂಗಳೂರು ವಿಶ್ವವಿದ್ಯಾಲಯ

ಜ್ಞಾನಭಾರತಿ, ಬೆಂಗಳೂರು–560 056

## BANGALORE UNIVERSITY

## Jnana Bharathi, Bengaluru-560 056

**ಬೆಂಗಳೂರು ವಿಶ್ವವಿದ್ಯಾಲಯ**

ಸಂಖ್ಯೆ: ಎಸ್‌ವೈಎನ್/ಎಸ್1/ವಿಶೇಷ/2016-2017

ಜ್ಞಾನ ಭಾರತಿ,
ಬೆಂಗಳೂರು-560 056
ದಿನಾಂಕ:10.01.2018

ಸಿಂಡಿಕೇಟ್ ಸದಸ್ಯರು,
ಬೆಂಗಳೂರು ವಿಶ್ವವಿದ್ಯಾಲಯ,
ಬೆಂಗಳೂರು-560 056.

ಮಾನ್ಯರೇ,

ವಿಷಯ: ದಿನಾಂಕ 10.01.2018 ರಂದು ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು.

* * *

ದಿನಾಂಕ 10.01.2018 ರಂದು ಬೆಳಿಗ್ಗೆ 11.30 ಗಂಟೆಗೆ ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು-560 001, ಇಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ ಸದರಿ ಪರಿನಿಯಮಾವಳಿಯನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ತಮ್ಮ ವಿಶ್ವಾಸಿ,

ಕುಲಸಚಿವರು 10/1/2018

# ಬೆಂಗಳೂರು ವಿಶ್ವವಿದ್ಯಾಲಯ

ಸಂಖ್ಯೆ: ಎಸ್‌ವೈಎನ್/ಎಸ್1/ವಿಶೇಷ/2017-18

ಜ್ಞಾನ ಭಾರತಿ
ಬೆಂಗಳೂರು-560 056
ದಿನಾಂಕ: 10-01-2018

**ದಿನಾಂಕ 10-01-2018 ರಂದು ಬೆಳಿಗ್ಗೆ 11.30 ಗಂಟೆಗೆ ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು-560 001, ಇಲ್ಲಿ ಜರುಗಿದ ವಿಶೇಷ ಸಿಂಡಿಕೇಟ್ ಸಭೆಯ ನಡವಳಿಗಳು.**

**ಹಾಜರಾದ ಸದಸ್ಯರು:**

| | | | |
|---|---|---|---|
| 1. | ಪ್ರೊ. ಸುದೇಶ್ ವಿ., ಕುಲಪತಿಗಳು (ಹಂಗಾಮಿ) | - | ಸಭಾಧ್ಯಕ್ಷರು |
| 2. | ಶ್ರೀ ವಸಂತಕುಮಾರ | - | ಸದಸ್ಯರು |
| 3. | ಶ್ರೀ ಬಿ. ಶಿವಣ್ಣ | - | ಸದಸ್ಯರು |
| 4. | ಶ್ರೀ ಜಯಣ್ಣ | - | ಸದಸ್ಯರು |
| 5. | ಶ್ರೀಮತಿ ನಫೀಸ್ ಫಾತಿಮಾ | - | ಸದಸ್ಯರು |
| 6. | ಶ್ರೀ ರವಿಕುಮಾರ್ ಬಿ. ಜಿ. | - | ಸದಸ್ಯರು |
| 7. | ಶ್ರೀ ಮಂಜುನಾಥ ಕೆ. ಆರ್. | - | ಸದಸ್ಯರು |
| 8. | ಪ್ರೊ. ಐ.ಎಸ್. ಶಿವಕುಮಾರ | - | ಸದಸ್ಯರು |
| 9. | ಶ್ರೀಮತಿ. ಹೊನ್ನಾಂಬ ಎಸ್, ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಸಾರ್ವಜನಿಕ ಶಿಕ್ಷಣ ಇಲಾಖೆ, | - | ಸದಸ್ಯರು |
| 10. | ಪ್ರೊ. ಶಿವರಾಜು ಸಿ ಕುಲಸಚಿವರು (ಮೌಲ್ಯಮಾಪನ) | - | ಸದಸ್ಯರು |
| 11. | ಪ್ರೊ. ಬಿ. ಕೆ. ರವಿ ಕುಲಸಚಿವರು | - | ಸದಸ್ಯ ಕಾರ್ಯದರ್ಶಿ |

ಮೊದಲಿಗೆ ಕುಲಸಚಿವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಹಾಗೂ ಪ್ರಭಾರ ಕುಲಪತಿಗಳಾಗಿ ಕಾರ್ಯಭಾರ ವಹಿಸಿಕೊಂಡ ನಂತರ ಮೊದಲ ಬಾರಿಗೆ ಸಿಂಡಿಕೇಟ್ ಸಭೆಯ ಅಧ್ಯಕ್ಷತೆಯನ್ನು ವಹಿಸಿರುವ ಪ್ರೊ. ಸುದೇಶ್ ವಿ., ಅವರನ್ನು, ಆತ್ಮೀಯವಾಗಿ ಸ್ವಾಗತಿಸಿ, ಸಭೆಯ ಕಾರ್ಯ ಕಲಾಪಗಳನ್ನು ನಡೆಸಿಕೊಡಬೇಕೆಂದು ಕುಲಪತಿಗಳನ್ನು ಕೋರಿದರು.

***Proceedings of the special meeting of the Syndicate held on 10-01-2018***

***ವಿಷಯ ಸಂಖ್ಯೆ: 1 : ಚಿನ್ನದ ಪದಕ ಮತ್ತು ಬಹುಮಾನ ನೀಡುವ ಬಗ್ಗೆ ಚರ್ಚೆ ಮತ್ತು ತೀರ್ಮಾನ.***

***ನಿರ್ಣಯ:***

ಕುಲಪತಿಗಳು ವಿಶೇಷ ಸಿಂಡಿಕೇಟ್ ಸಭೆಗೆ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿ, 53ನೇ ವಾರ್ಷಿಕ ಘಟಿಕೋತ್ಸವದಲ್ಲಿ ಚಿನ್ನದ ಪದಕ ಮತ್ತು ಬಹುಮಾನ ನೀಡುವ ಬಗ್ಗೆ ವಿವರಗಳನ್ನು ಸಭೆಗೆ ಮಂಡಿಸಲು ಕುಲಸಚಿವರು(ಮೌಲ್ಯಮಾಪನ) ಇವರನ್ನು ಕೋರಿದರು.

ಕುಲಸಚಿವರು(ಮೌಲ್ಯಮಾಪನ) ಇವರು ಮಾತನಾಡಿ ವಿಶ್ವವಿದ್ಯಾಲಯ ಪ್ರಾರಂಭವಾದ ದಿನಗಳಲ್ಲಿ ದಾನಿಗಳು ಸ್ಥಾಪಿಸಿರುವ ದತ್ತಿ ನಿಧಿಯಿಂದ ಬರುವ ಬ್ಯಾಂಕಿನ ಬಡ್ಡಿ ಮೊತ್ತವು ಚಿನ್ನದ ಪದಕ ನೀಡಲು ಸಾಕಾಗುತ್ತಿಲ್ಲ, ಬಹುತೇಕ ಸಂದರ್ಭಗಳಲ್ಲಿ ಈ ಪ್ರತಿ ದತ್ತಿ ನಿಧಿಯಿಂದ ವಾರ್ಷಿಕ ರೂ.82/- ರಿಂದ ರೂ.250/-ಗಳ ವರೆಗೆ ಬಡ್ಡಿ ಬರುತ್ತಿದ್ದು, ವಿಶ್ವವಿದ್ಯಾಲಯವು ಈ ಬಡ್ಡಿ ಬಾಬ್ತಿಗೆ ಉಳಿದ ಹಣ ಸೇರಿಸಿ ರೂ.500/-ಗಳ ಚೆಕ್ ಮತ್ತು ಚಿನ್ನದ ಪದಕದ ಪ್ರಮಾಣ ಪತ್ರವನ್ನು ಈ ಹಿಂದೆ ತೆಗೆದುಕೊಂಡ ಸಿಂಡಿಕೇಟ್ ನಿರ್ಣಯದನುಸಾರ ನೀಡಲಾಗುತ್ತಿತ್ತು. ಆದರೆ, ಕಳೆದ ಸಾಲಿನಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳಿಂದ ವ್ಯಾಪಕ ಟೀಕೆ ಬಂದಿದ್ದರಿಂದ ಈ ವ್ಯವಸ್ಥೆಯನ್ನು ಪರಾಮರ್ಶಿಸುವ ಬಗ್ಗೆ ವಿದ್ಯಾವಿಷಯಕ ಪರಿಷತ್ತಿನ ಮುಂದೆ ವಿಷಯವನ್ನು ಮಂಡಿಸಲಾಗಿತ್ತು. ವಿಶ್ವವಿದ್ಯಾಲಯವೂ ಸಹ ದತ್ತಿ ಸ್ಥಾಪಿಸಿರುವ ದಾನಿಗಳನ್ನು ಸಂಪರ್ಕಿಸಿ ಚಿನ್ನದ ಪದಕ ನೀಡಲು ಸಾಕಾಗುವ ಉಳಿದ ಮೊತ್ತವನ್ನು ನೀಡಲು ವಿನಂತಿಸಿತ್ತು. ಆದರೆ, ದಾನಿಗಳಿಂದ ಯಾವುದೇ ಸಕಾರಾತ್ಮಕ ಉತ್ತರ ಬಂದಿರುವುದಿಲ್ಲ. ಆದಕಾರಣ ವಿದ್ಯಾವಿಷಯಕ ಪರಿಷತ್ತು ದಾನಿಗಳು ಇಟ್ಟಿರುವ ದತ್ತಿ ನಿಧಿಯಿಂದ ಚಿನ್ನದ ಪದಕ ನೀಡಲು ಬೇಕಾದಷ್ಟು ಬಡ್ಡಿ ಬರುತ್ತದೋ ಅಂತಹ ಸಂದರ್ಭದಲ್ಲಿ ಚಿನ್ನದ ಪದಕ ನೀಡಲು ಹಾಗೂ ಸಾಕಷ್ಟು ಬಡ್ಡಿ ಹಣ ಬರದ ಉಳಿದ ಪ್ರಕರಣಗಳಲ್ಲಿ ನಗದು ಬಹುಮಾನ ಎಂದು ಪ್ರಮಾಣ ಪತ್ರದಲ್ಲಿ ನಮೂದಿಸಿ, ಬಡ್ಡಿ ಹಣವನ್ನು ಚೆಕ್ ರೂಪದಲ್ಲಿ ನೀಡಲು ಮತ್ತು ವಿಶ್ವವಿದ್ಯಾಲಯ ಈಗಾಗಲೇ ಪ್ರಥಮ ರ್‍ಯಾಂಕ್ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡುತ್ತಿರುವ ಪದ್ಧತಿಯನ್ನು ಹಾಗೆಯೇ ಮುಂದುವರೆಸಲು ನಿರ್ಣಯಿಸಿದೆ. ಆದ್ದರಿಂದ, ಸಿಂಡಿಕೇಟ್ ಸಭೆಯು ವಿದ್ಯಾವಿಷಯಕ ಪರಿಷತ್ತಿನ ಶಿಫಾರಸ್ಸನ್ನು ಅನುಮೋದಿಸಬಹುದೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ವಿಶ್ವವಿದ್ಯಾಲಯದ ಪರಿನಿಯಮಾವಳಿ 17.5ರಲ್ಲಿ ದತ್ತಿ ನಿಧಿಗಳಿಂದ ಚಿನ್ನದ ಪದಕ ನೀಡಲು ಸಾಕಾಗುವಷ್ಟು ಬಡ್ಡಿ ಬರದ ಸಂದರ್ಭದಲ್ಲಿ ನಗದು ಬಹುಮಾನ ನೀಡಲು ಸಿಂಡಿಕೇಟ್‌ಗೆ

ಅಧಿಕಾರವಿದೆ. ಸದರಿ ಪರಿನಿಯಮಾವಳಿಯನುಸಾರ ಮೇಲ್ಕಂಡ ಪ್ರಸ್ತಾವನೆಯನ್ನು ಅನುಮೋದಿಸಬಹುದೆಂದು ತಿಳಿಸಿದರು.

ಶ್ರೀಮತಿ ನಫೀಸ್ ಫಾತಿಮಾ ಮತ್ತು ಶೀ ಶಿವಣ್ಣ ಬಿ, ಅವರು ಮಾತನಾಡಿ ವಿಶ್ವವಿದ್ಯಾಲಯದ ಹಳೇ ವಿದ್ಯಾರ್ಥಿಗಳು ಹಾಗೂ ಇತರ ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ ಹೆಚ್ಚಿನ ಸಂಖ್ಯೆಯಲ್ಲಿ ದತ್ತಿ ನಿಧಿಯನ್ನು ಸ್ಥಾಪಿಸಲು ಕ್ರಮವಹಿಸಬೇಕೆಂದು ಕೋರಿದರು.

ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಮತ್ತು ನಗದು ಬಹುಮಾನ ನೀಡುವ ಬಗ್ಗೆ ಶ್ರೀಮತಿ. ಹೊನ್ನಾಂಬ ಎಸ್, ಅವರು ಮಾತನಾಡಿ ವಿಶ್ವವಿದ್ಯಾಲಯದ ಕೆಲವೊಂದು ಸ್ನಾತಕೋತ್ತರ ವಿಜ್ಞಾನ ವಿಭಾಗಗಳಲ್ಲಿ ಎರಡು/ ಮೂರು ವಿಶೇಷತೆಯನ್ನು ಭೋದಿಸುತ್ತಿದ್ದು, ಪ್ರತಿ ವಿಶೇಷತೆಯಲ್ಲಿ ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಅಥವಾ ನಗದು ಬಹುಮಾನ ನೀಡಬೇಕೆಂದು ಕೋರಿದರು. ಕುಲಪತಿಗಳು ಉತ್ತರಿಸಿ, ಈ ಬಗ್ಗೆ ವಿಶ್ವವಿದ್ಯಾಲಯ ಸೂಕ್ತ ಕ್ರಮ ವಹಿಸುವುದು ಎಂದು ತಿಳಿಸಿದರು.

**ದೀರ್ಘ ಚರ್ಚೆಯ ನಂತರ ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 17.5ರ ಅನುಸಾರ ದತ್ತಿ ನಿಧಿಗಳಿಂದ ಚಿನ್ನದ ಪದಕ ನೀಡಲು ಸಾಕಾಗುವಷ್ಟು ಬಡ್ಡಿ ಮೊತ್ತ ಬರದ ದತ್ತಿ ನಿಧಿಗಳಿಂದ ನಗದು ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ನೀಡಲು ಸಿಂಡಿಕೇಟ್ ಸರ್ವಾನುಮತದಿಂದ ನಿರ್ಣಯಿಸಿತು. ಮುಂದುವರೆದು, ವಿಶ್ವವಿದ್ಯಾಲಯದ ಹಳೇ ವಿದ್ಯಾರ್ಥಿಗಳು ಹಾಗೂ ಇತರ ಸಂಘ ಸಂಸ್ಥೆಗಳನ್ನು ಸಂಪರ್ಕಿಸಿ ಹೆಚ್ಚಿನ ಸಂಖ್ಯೆಯಲ್ಲಿ ದತ್ತಿ ನಿಧಿಯನ್ನು ಸ್ಥಾಪಿಸಲು ಸೂಕ್ತ ಕ್ರಮವಹಿಸಲು ಸಿಂಡಿಕೇಟ್ ಸೂಚಿಸಿತು.**

ಸದಸ್ಯರುಗಳು ಮುಂದುವರೆದು ಮಾತನಾಡಿ, ಚಿನ್ನದ ಪದಕ ಪ್ರಮಾಣ ಪತ್ರ ನೀಡಲು ಪ್ರತಿ ಪದಕ ವಿಜೇತ ವಿದ್ಯಾರ್ಥಿಗಳು ರೂ.500/-ಗಳ ಶುಲ್ಕವನ್ನು ಪಾವತಿಸಬೇಕೆಂದು ವಿಶ್ವವಿದ್ಯಾಲಯ ಹೊರಡಿಸಿರುವ ಸುತ್ತೋಲೆಯನ್ನು ವಾಪಸ್ ಪಡೆಯಬೇಕೆಂದು ಒತ್ತಾಯಿಸಿದರು. ಕುಲಸಚಿವರು (ಮೌಲ್ಯಮಾಪನ), ಇವರು ಮಾತನಾಡಿ, ಬಹಳಷ್ಟು ವರ್ಷಗಳಿಂದಲೂ ಸಹ ಈ ಪದ್ಧತಿ ಇದ್ದು, ಇದರ ಬಗ್ಗೆ ಈಗಾಗಲೇ ಸ್ಪಷ್ಟೀಕರಣವನ್ನು ನೀಡಲಾಗಿದೆ. ಆದರೆ, ಈ ಸ್ಪಷ್ಟೀಕರಣ ಪತ್ರಿಕೆಗಳಲ್ಲಿ ಸರಿಯಾಗಿ ಪ್ರಕಟಗೊಂಡಿರುವುದಿಲ್ಲವೆಂದು ತಿಳಿಸಿದರು. ದೀರ್ಘ ಚರ್ಚೆಯನಂತರ ಈ ಶುಲ್ಕವನ್ನು ರದ್ದುಪಡಿಸಲು ಹಾಗೂ ಈಗಾಗಲೇ ಪಾವತಿಸಿರುವ ಪದಕ ವಿಜೇತ ವಿದ್ಯಾರ್ಥಿಗಳಿಗೆ ಶುಲ್ಕವನ್ನು ಮರು-ಪಾವತಿ ಮಾಡಲು ಸಿಂಡಿಕೇಟ್ ನಿರ್ಣಯಿಸಿತು

**_Proceedings of the special meeting of the Syndicate held on 10-01-2018_**

***ವಿಷಯ ಸಂಖ್ಯೆ: 2 : ದಿನಾಂಕ: 28-12-2017ರಂದು ನಡೆದ ವಿಶೇಷ ಕೇಂದ್ರ ಖರೀದಿ ಸಮಿತಿ ನಡಾವಳಿ ಅನುಮೋದನೆ ಕುರಿತು.***

*ನಿರ್ಣಯ:*

53ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರಥಮ ರ್‍ಯಾಂಕ್ ಹಾಗೂ ಚಿನ್ನದ ಪದಕ ವಿಜೇತ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳನ್ನು ನೀಡಲು ಮೆ. ನವೀನ್ ಎಂಟರ್‌ಪ್ರೈಸಸ್, ಬೆಂಗಳೂರು ಇವರಿಂದ ಪ್ರತಿ ಚಿನ್ನದ ಪದಕಕ್ಕೆ ರೂ.3,650/- (ತೆರಿಗೆ ಸೇರಿ) ದರದಲ್ಲಿ, ಒಟ್ಟು 110 ಚಿನ್ನದ ಪದಕಗಳನ್ನು ಖರೀದಿಸುವ ಬಗ್ಗೆ ದಿನಾಂಕ: 28-12-2017ರಂದು ನಡೆದ ವಿಶೇಷ ಕೇಂದ್ರ ಖರೀದಿ ಸಮಿತಿ ಮಾಡಿರುವ ಶಿಫಾರಸ್ಸನ್ನು ಸಿಂಡಿಕೇಟ್ ಅನುಮೋದಿಸಿತು.

| | |
|---|---|
| ಸಹಿ/- | ಸಹಿ/- |
| **ಕುಲಸಚಿವರು** | **ಕುಲಪತಿಯವರು** |

//ಪ್ರತಿ//

[signature]
ಕುಲಸಚಿವರು 10/1/2018